ಕಾರ್ವೆಂಡೆಲ್ ಶ್ರೇಣಿಗಳು 9000 ಅಡಿಗಳ ಎತ್ತರದ ಹಾದಿ ಒಳಗೊಂಡಿವೆ. ಮೊದಲ ಸ್ಟೇಷನ್‌ನಲ್ಲಿ ಕೇಬಲ್‌ಕಾರಲ್ಲಿ ಕುಳಿತು 7000 ಅಡಿಯ ಎತ್ತರ ತಲುಪಿದೆವು. ಒಂದು ರೀತಿಯಲ್ಲಿ ಕಾರ್ವೆಂಡೆಲ್‌ನ ತೊಡೆಯ ಮೇಲೆ ಕುಳಿತ ಬೆಚ್ಚನೆಯ ಅನುಭವ. ಕೆಳಗೆ ನೋಡಿದರೆ ಅದ್ಭುತ ಕೋನಿಫೆರಸ್ ದಟ್ಟ ಕಾಡು, ನೀಲಿಬಣ್ಣದ ಹೊಳೆವ ಸರೋವರಗಳು. ಪರ್ವತಗಳ ಸುಳಿಯ ನಡುವೆ ನಾವು ಯಾವ ಕಡೆಗೆ ನೋಡಿದರೂ ಚೆಲುವಿನ ಶಿಖರಗಳೇ ಕಾಣಿಸುತ್ತವೆ. ಈ ಉನ್ನತ ಪರಿಸರದಲ್ಲೂ ರೆಸ್ಟೋರೆಂಟ್ ಇದೆ. ಸನಿಹದಲ್ಲೇ ಕಾರ್ವೆಂಡೆಲ್‌ನ ಅನನ್ಯತೆಗಳನ್ನು ಬಿಂಬಿಸುವ ಪುಟ್ಟ ಮ್ಯೂಸಿಯಂ ಕೂಡ ಇದೆ.

### ನೀಲಕನ್ನಡಿಯಂಥ ನೀರತಾವುಗಳು

ಮಿಟ್ಟೆನ್‌ವಾಲ್ಡ್‌ನಲ್ಲಿ ಸರೋವರಗಳ ಬಗ್ಗೆ ಹೇಳದೆ ಹೋದರೆ ಈ ಬರಹಕ್ಕೆ ನ್ಯಾಯ ದೊರೆಯುವುದಿಲ್ಲ. ಹಸಿರು ಫ್ರೇಮಿನಲ್ಲಿ ಹುದುಗಿಸಿಟ್ಟ ಮನೋಹರ ನೀಲಕನ್ನಡಿಯಂಥ ಸರೋವರಗಳಿವು. ಥಳಥಳನೆ ಹೊಳೆಯುತ್ತ ಏರಿಳಿವ ಪುಟ್ಟ ಪುಟ್ಟ ಅಲೆಗಳ ಈ ಸರೋವರಗಳು ಒಂದಿಷ್ಟೂ ಕಳಂಕವಿಲ್ಲದ ಸೃಷ್ಟಿ ಸೋಜಿಗಗಳೆನ್ನಿಸಿದವು.

ಈ ಮಿಟ್ಟೆನ್‌ವಾಲ್ಡ್ ಮೊದಲು ಬಿಷಪ್ಪರ ಅಧೀನದಲ್ಲಿದ್ದು, 19ನೇ ಶತಮಾನದ ಮೊದಲಿಗೆ ಬವೇರಿಯಾ ಆಡಳಿತದ ವ್ಯಾಪ್ತಿಗೆ ಸೇರಿತು. ಹಳ್ಳಿಯನ್ನು ಪೂರ್ತಿಯಾಗಿ ಓಡಾಡುತ್ತಲೇ ನೋಡಬಹುದು, ನೋಡಬೇಕು


ಚಾರಣದ ಹಾದಿ



ಜರ್ಮನಿ ಆಸ್ಟ್ರಿಯಾ ಗಡಿ


ಹಿಮದಿಂದ ತುಂಬಿದ ಹಾದಿ

### ಆ ಬೆಟ್ಟದಲ್ಲಿ, ಏರುದಾರಿಯಲ್ಲಿ...

ಮುಗಿಲೆತ್ತರದ ಶಿಖರಗಳ ಹಾದಿ ಸಲೀಸಾದುದಲ್ಲ. ಕಲ್ಲು, ಮಣ್ಣು, ಬಂಡೆ ಗಳ ಮೇಲ್ಮೈ, ಕಿರುಹಾದಿಗಳು ಸವಾಲಾಗಿ ಪರಿಣಮಿಸುತ್ತವೆ. ಆದರೆ, ಪರ್ವತಗಳು ಮರುಳು ಮಾಡುತ್ತಿದ್ದವು. ಏದುಸಿರು ಬಿಡುತ್ತಲೇ ಮೇಲೇರಿಕೆ ಶಿಖರಾಗ್ರ ಮುಟ್ಟಿದಾಗ, ಅಲ್ಲಿಯ ಮೋಹಕದೃಶ್ಯ ಕಂಡು ಮತ್ತೇನೂ ಬೇಡವೆನ್ನಿಸಿಬಿಟ್ಟಿತು. ಮುನ್ನೂರರವತ್ತು ಡಿಗ್ರಿಕೋನದಲ್ಲಿ ಎತ್ತ ತಿರುಗಿದರೂ ದೊರಗಾಗಿ, ಬಿರುಸಾಗಿ, ಕಠಿಣವಾಗಿ, ಪದರಪದರವಾಗಿ ಮೇಲೇರಿ ನಿಂತ ಅಗ್ರಗಿರಿಪಂಕ್ತಿ ಗಳು. ನೀಲಿ, ಬೂದು, ಬಿಳಿ, ಕಂದುಬಣ್ಣದ ವರ್ಣವಿಲಾಸ. ಆ ಬಲಶಾಲಿ ಪರ್ವತಗಳೆದೆಯಿಂದ ರೊಯ್ಯನೆ ಬೀಸುವ ನಡುಕ ಹುಟ್ಟಿಸುವ ಗಾಳಿ.

ಈ ಚೂಪುಶಿಖರ ಭಾಗವೇ ಜರ್ಮನಿ ಹಾಗೂ ಆಸ್ಟ್ರಿಯಾ ದೇಶಗಳ ಗಡಿಭಾಗ. ಅತ್ತ ಆಸ್ಟ್ರಿಯಾ, ಇತ್ತ ಜರ್ಮನಿ. ಈ ಪರಿಸರದಲ್ಲಿ ನಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸುಲಭ, ಮಧ್ಯಮ, ಕಠಿಣ – ಹೀಗೆ ಮೂರು ರೀತಿಯ ಚಾರಣಗಳಿವೆ. ಅತ್ಯಂತ ಕಡಿದಾದ ಭಾಗಗಳಲ್ಲಿ ಚಾರಣ ಮಾಡುವ ಸಾಹಸಪ್ರಿಯರೇ ಹೆಚ್ಚು. ಆದರೆ, ಅಭ್ಯಾಸವಿಲ್ಲದ ನನಗಂತೂ ಸುಲಭ ಮಾರ್ಗವೇ ಕಠಿಣವೆನ್ನಿಸಿತು, ಅನುಭವ ಮಾತ್ರ ಅನೂಹ್ಯವಾದುದು.

ಮಿಟ್ಟೆನ್‌ವಾಲ್ಡ್ ಏಳೆಂಟು ಸಾವಿರ ಜನಸಂಖ್ಯೆ ಹೊಂದಿರುವ ಊರು. 'ಈಸಾರ್' ನದಿಕಣಿವೆಯಲ್ಲಿ ಈ ಊರು ಬೆಚ್ಚಗೆ ಕೂತಂತಿದೆ. ಜರ್ಮನಿಯ ಜೀವನಾಡಿಯಂತಿರುವ 292 ಕಿ.ಮೀ. ಉದ್ದದ 'ಈಸಾರ್' ನದಿಯ ಉಗಮಸ್ಥಾನವೇ ಇಲ್ಲಿಯ 'ಕಾರ್ವೆಂಡಲ್' ಪರ್ವತಾವಳಿ.

ಕೂಡ. ಪ್ರವಾಸಿಗರಿಗೆ ಈ ಹಳ್ಳಿಯಲ್ಲಿ ನೋಡಲೇನಿದೆ ಎಂದು ಕೇಳಿದರೆ, ನನ್ನ ಪ್ರಕಾರ ಈ ಹಳ್ಳಿಯ ಅಂದವೇ ಮೊಟ್ಟಮೊದಲಿನ ಆಕರ್ಷಣೆ. ಪುಟ್ಟ ವಿಸ್ತೀರ್ಣ, ಒಡಲ ತುಂಬ ಬಗೆಯ ಗಿಡ–ಮರ–ಹೂಗಳ ತೇರು, ಚಂದದ ಇಳಿಜಾರಿನ ಛಾವಣಿ ಹೊದ್ದ ಮರದ ಮನೆಗಳು, ನೆಲದಲ್ಲಿ ಹರಿವ ಪುಟ್ಟ ಝರಿ, ಚಿತ್ರಶಾಲೆಯಂಥ ಮನೆಯಂಗಳಗಳು, ಎತ್ತರದ ಚೂಪುಗೋಪುರ ಹೊಂದಿದ ಚರ್ಚ್, ಹಿನ್ನೆಲೆಯಲ್ಲಿ ಉದ್ದಕ್ಕೂ ಭವ್ಯಪರ್ವತಶ್ರೇಣಿಗಳು – ಕಿನ್ನರಲೋಕದಲ್ಲಿ ಏನಿಲ್ಲ ಹೇಳಿ.

ಊರಿನಲ್ಲೊಂದು ವೃತ್ತವಿದೆ. ಅಲ್ಲಿ ಕೂರಲು ಬೆಂಚುಗಳಿವೆ. ಏನಾದರೊಂದು ಮನೋರಂಜನೆಯ ಚಟುವಟಿಕೆ ನಡೆಯುತ್ತಿರುತ್ತವೆ. ಪ್ರವಾಸಿಗರು, ಸ್ಥಳೀಯ ವೃದ್ಧರು ಈ ವೃತ್ತದಲ್ಲಿ ಸಂಜೆಗಳನ್ನು ನಿರಾಳವಾಗಿ ಆನಂದಿಸುತ್ತ ಕಳೆಯುತ್ತಾರೆ. ಹಳ್ಳಿಗಳು ತಮ್ಮ ಪಾರಂಪರಿಕ ವಿನ್ಯಾಸವನ್ನು ಉಳಿಸಿಕೊಂಡೇ ಆಧುನಿಕ ಮಜಲಿಗೂ ತೆರೆದುಕೊಳ್ಳುವುದಕ್ಕೆ ಮಿಟ್ಟೆನ್‌ವಾಲ್ಡ್ ಉದಾಹರಣೆ ಎನ್ನಿಸುತ್ತದೆ.

ಈ ಹಳ್ಳಿಯ ಇನ್ನೊಂದು ವಿಶೇಷ, ವಯಲಿನ್ ತಯಾರಿಕೆ. 17ನೇ ಶತಮಾನದ 'ಮಥಾಯಿಸ್ ಕ್ಲೋಟ್ಜ್' ಎಂಬ ರೈತನ ಮಗ ಇಟಲಿಗೆ ಹೋಗಿ, ಲುಥಿಯರ್ ಮತ್ತು ಅಮಾಟಿ ಎನ್ನುವ ಪ್ರಸಿದ್ಧ ವಯಲಿನ್ ತಯಾರಿಕರಿಂದ ವಿದ್ಯೆ ಕಲಿತು ಇಲ್ಲಿಗೆ ಬಂದು 'ವಯಲಿನ್ ತಯಾರಿಕಾ ಘಟಕ' ಸ್ಥಾಪಿಸಿಬಿಟ್ಟ.

ವಯಲಿನ್ ಪ್ರತಿಮೆಯೊಂದನ್ನು ಪ್ರಮುಖಬೀದಿಯ ವೃತ್ತದಲ್ಲಿ ನಿಲ್ಲಿಸಿದ್ದಾರೆ. ಅತ್ಯುತ್ಕೃಷ್ಟ ಮರದಿಂದ ತಯಾರಾಗುವ ಇಲ್ಲಿನ ವಯಲಿನ್‌ಗಳಿಗೆ ಅಪಾರ ಬೇಡಿಕೆಯಿದೆ. 'ವಿಶ್ವ ವಯಲಿನ್ ಸಂಗೀತಸ್ಪರ್ಧೆ' ಮತ್ತು 'ವಯಲಿನ್ ತಯಾರಿಕಾ ಸ್ಪರ್ಧೆ'ಗಳೂ ಇಲ್ಲಿ ಪ್ರತಿ ವರ್ಷ ನಡೆಯುತ್ತವೆ.